# ಕುರುಡನು ಹೊಂದಿದ ಹೊಸ ಬಾಳು



## ಕುರುಡನು ಹೊಂದಿದ ಹೊಸ ಬಾಳು

"ಜಲ್" "ಜಲ್" ಎಂದು ಭಿಕ್ಷೆಯ ತಟ್ಟೆಯಲ್ಲಿ ಬಿದ್ದಿರುವ ನಾಣ್ಯಗಳನ್ನು ಅಲ್ಲಾಡಿಸುತ್ತಾ ಭಿಕ್ಷೆ ಕೇಳುತ್ತಿದ್ದನು ಬಾರ್ತಿಮಾಯನು.

ಹೌದು! ಬಾರ್ತಿಮಾಯನು ಎರಡು ಕಣ್ಣು ಕಾಣದ ಒಂದು ಹುಟ್ಟು ಕುರುಡನು. ಯೆರಿಕೋವಿಗೆ ಹೋಗುವ ಮುಖ್ಯದ್ವಾರದಲ್ಲಿ ಕುಳಿತು ಆ ದಾರಿಯಲ್ಲಿ ಬಹು ಜನರ ಗುಂಪು ಹಾದು ಹೋಗುವದನ್ನು ಕಂಡು ಭಿಕ್ಷೆ ಬೇಡುತ್ತಿದ್ದನು. ಯಾವ ಒಂದು ಕೆಲಸವನ್ನು ಮಾಡಲು ಸಾಧ್ಯವಾಗದಂತ ಅವನನ್ನು, ಅವನ ಹೆತ್ತವರು ಅವನನ್ನು ಚಿಕ್ಕ ವಯಸ್ಸಿನಿಂದಲೇ ಭಿಕ್ಷೆತೆಗೆಯಲು ಕಳುಹಿಸಿಬಿಟ್ಟರು. ಅವನು ಕೂಡ ಕುಟುಂಬಕ್ಕೆ ಭಾರವಾಗಿರಬಾರದೆಂದು ನೆನೆಸಿ ಬಹು ವರ್ಷದಿಂದ ಭಿಕ್ಷೆಬೇಡುತ್ತಾ ಇದ್ದನು.

ಯೆರಿಕೋವಿನ ಹಾದಿಯಲ್ಲಿ ಹಾದು ಹೋಗುವವರ ಕಾಲಿನ ಸಪ್ಪಳವನ್ನು ಕೇಳಿದ ತಕ್ಷಣವೇ ತನ್ನ ಭಿಕ್ಷೆಯ ಪಾತ್ರೆಯನ್ನು ಅಲ್ಲಾಡಿಸಿ,"ಸ್ವಾಮಿ! ಭಿಕ್ಷೆ ಕೊಡಿ.." ಎಂದು ಬೇಡುವನು. ಆಗ ಚಿಲ್ಲರೆ ಏನಾದರು ತನ್ನ ಪಾತ್ರೆಬಿದ್ದರೆ ಬಹು ಸಂತೋಷವುಳ್ಳವನಾಗುವನು. ಆದರೆ ಬೇರೆಯವರುಗಳ ರೀತಿ ತನಗೇನಾದರು ಕಣ್ಣಿನ ದೃಷ್ಟಿ ಇದ್ದಿದ್ದರೆ ಈ ಸ್ಥಿತಿ ತನಗೆ ಬಂದಿರಲು ಸಾಧ್ಯವೇ ಇಲ್ಲ ಎಂದು ಆಗಾಗೆ ಬಹು ಯೋಚಿಸುತ್ತಾ ದುಃಖ ಪಡುತ್ತಿದ್ದನು.

ಒಂದು ದಿನ ಆ ಯೆರಿಕೊ ಪಟ್ಟಣ ಜನಗಳ ನಡುವೆ ಗದ್ದಲ ಹೆಚ್ಚಾಗಲು, ಇಂದು ಏನು ವಿಶೇಷ?ಊರೊಳಗೆ ಏನಾದರು ತೊಂದರೆಯೇನು? ಅಥವಾ ಯಾರಾದರೂ ಮುಖ್ಯಾಥಿತಿಗಳು ಬರುತ್ತಿದ್ದಾರೆಯೆ ಎಂಬ ಸಂಶಯ ಅವನಲ್ಲಿ ಉಂಟಾಯಿತು.ಬಾರ್ತಿಮಾಯನು ತಕ್ಷಣ ತನ್ನ ಹತ್ತಿರದಲ್ಲಿ ಕುಳಿತಿರುವ ಸಹ ಭಿಕ್ಷಕರ ಬಳಿ ವಿಚಾರಿಸಿದನು.

ಹೌದು! ಅವನು ಲೆಕ್ಕಿಸಿದಂತೆ ಆ ಊರಿಗೆ ಮುಖ್ಯಾಥಿತಿಯಾದ ಯೇಸು ಬಂದಿದ್ದನು. ಯೇಸು ಈ ಊರಿಗೆ ಬರುವ ಮುನ್ನವೆ ಹೇಗೊ ಎಲ್ಲರಿಗೂ ಆ ಸುದ್ದಿ ಹಬ್ಬಿಬಿಟ್ಟಿತು.

"ಯೇಸು ಎಂಬುವವನು ಈ ದಿನ ನಮ್ಮ ಊರಿಗೆ ಬಂದಿದ್ದಾನೆ. ಆತನು ಅನೇಕ ವ್ಯಾಧಿಪೀಡಿತರನ್ನು ಸ್ವಸ್ಥಮಾಡುತ್ತಾನೆ. ನಂತರ ಆತನು ಬೇಗನೆ ಮತ್ತೊಂದು ಊರಿಗೆ ಹೊರಟುಹೋಗಿ ಬಿಡಿತ್ತಾನೆ. ಆದರಿಂದಲೇ ಜನಗಳು ಗುಂಪು ಗುಂಪಾಗಿ ಬೇಗ ಬೇಗನೆ ಹಾದುಹೋಗುತ್ತಿದ್ದಾರೆ."ಎಂದು ಅವನ ಸ್ನೇಹಿತರು ಅವನಿಗೆ ತಿಳಿಸಿದರು.

'ಓ! ಯೇಸುವಿನ ಬಗ್ಗೆ ನಾನು ಅನೇಕ ಸಾರಿ ಕೇಳಿದ್ದೇನೆ. ಆತನು ನಮ್ಮ ಊರಿಗೆ ಬಂದಿದ್ದಾನೆಯೇ? ಸ್ವಾಮಿ ! ನಾನು ಹೇಗಾದರೂ ಆತನನ್ನು ನೋಡಬೇಕು' ಎಂದು ಬಹು ಹಂಬಲದಿಂದ ತನ್ನ ಸ್ನೇಹಿತರ ಬಳಿ ಹೇಳಿದನು. ಆದರೆ ಅವನ ಹತ್ತಿರದಲ್ಲಿ ಕುಳಿತವರು ಕೂಡ ಮೈನೆಟ್ಟಗಿಲ್ಲದವರುಗಳು, ಇವನನ್ನು ಕರಕೊಂಡು ಹೋಗಲು ಸಾಧ್ಯವಿಲ್ಲ.

ತಕ್ಷಣ ಅವನು ಕುಳಿತ್ತಿದ್ದ ಯೆರಿಕೊವಿನ ದಾರಿಯ ಬಳಿಯಲ್ಲಿ ಬಹು ಜನರ ಗುಂಪು ಹಾದುಹೋಗುತ್ತಿರುವಾಗ, "ಯೇಸು ಯೇಸು" ಎಂದು ಅನೇಕರು ಕೂಗುವ ಶಬ್ಧ ಅವನ ಕಿವಿಗೆ ಬೀಳಲು, ಯೇಸು ಈ ದಾರಿಯಲ್ಲಿ ಹಾದು ಬರುತ್ತಿದ್ದಾನೆಂದು ಅವನು ಅರಿತು, ದಾವೀದನ ಕುಮಾರನೇ, ಯೇಸುವೇ! ನನ್ನನ್ನು ಕರುಣಿಸು ಎಂದು ಕೂಗಲು ಪ್ರಾರಂಭಿಸಿದನು. ಮತ್ತೆ ಮತ್ತೆ ಕೂಗುವದನ್ನು ಕಂಡಂತ ಅನೇಕರು ಅವನನ್ನು ಸುಮ್ಮನಿರು ಎಂದು ಗದರಿಸಿದರು.

ಆದರೆ ಮಾರ್ತಿಮಾಯನಿಗೆ ತಾನೆ ಅವನ ಒಂದು ಸ್ಥಿತಿ ಏನೆಂದು ಗೊತ್ತಾಗುತ್ತದೆ? ಮತ್ತಷ್ಟೂಕೂಗಿದನು, ಬಾರ್ತಿಮಾಯನ ಕೂಗನ್ನು ಆ ಗುಂಪಿನಲ್ಲಿ ಕೇಳಿಸಿಕೊಂಡ ಯೇಸು ಅವನನ್ನು ಕರೆಯಿರಿ ಅಂದನು.

ತಕ್ಷಣ ಇಬ್ಬರು ಬೇಗ ಬೇಗನೆ ಬಾರ್ತಿಮಾಯನ ಬಳಿ ಬಂದು ಯೇಸು ನಿನ್ನನ್ನು ಕರೆಯುತ್ತಿದ್ದಾನೆ ಎಂದು ಹೇಳಿದರು. ಅವನು ತಟ್ಟನೆ ಎದ್ದು ತನ್ನ ಹೊದಿಯನ್ನು ತೆಗೆದುಹಾಕಿ ಯೇಸುವಿನ ಬಳಿಗೆ ಬಂದನು.

ಯೇಸು ಅವನನ್ನು ಕಂಡು ನಾನು ನಿನಗೆ ಏನು ಮಾಡಬೇಕೆಂದು ಕೋರುತ್ತಿ ಎಂದು ಕೇಳಲು, ಆ ಕುರುಡನು–ನನಗೆ ಕಣ್ಣು ಬರುವಂತೆ ಮಾಡಬೇಕು, ಗುರುವೇ, ಅಂದನು. ಯೇಸು ಅವನಿಗೆ ಹೋಗು ನಿನ್ನ ನಂಬಿಕೆಯೆ ನಿನ್ನನ್ನು ಸ್ವಸ್ಥಮಾಡಿ ಅದೆ ಎಂದು ಹೇಳಿದನು. ಕೂಡಲೇ ಅವನಿಗೆ ಕಣ್ಣು ಬಂದವು; ನೋಡಿರಿ ಇದುವರೆಗೂ ಯಾರನ್ನು ನೋಡದ ಅವನಿಗೆ ಈಗ ಎಷ್ಟು ಸಂತೋಷವಾಗಿರಬೇಕು ! ಪ್ರೀತಿ ತುಂಬಿದ್ದ ಯೇಸುವಿನ ಮುಖವನ್ನು ಕಂಡ ಸಂತೋಷದಿಂದ ಆತನಿಗೆ ಕೃತಜ್ಞತೆಯನ್ನು ತಿಳಿಸಿದನು.

ಹೌದು! ಮನುಷ್ಯಕುಮಾರನಾಗಿ ಈ ಭೂಮಿಗೆ ಬಂದಂತ ಯೇಸು ಕ್ರಿಸ್ತನು, ಬಹು ರೋಗಿಗಳನ್ನು ಸ್ವಸ್ಥಮಾಡಿದನು.ಇಂದು ಕೂಡ ಆತನು ಎಂತ ಒಂದು ರೋಗವನ್ನು ಗುಣಪಡಿಸಲು ಶಕ್ತನಾಗಿಯೇ ಇದ್ದಾನೆ.

ನನ್ನ ಪ್ರೀಯ ಸಹೋದರರೆ,ವೈದ್ಯರುಗಳು ನಿಮ್ಮ ರೋಗಗಳು ಗುಣವಾಗುವದು ಬಹು ಕಷ್ಟ ಎಂದು ಹೇಳಿರ ಬಹುದು. ಇದರ ನಿಮಿತ ನೀವು ಹೆದರಿಕೊಂಡಿರ ಬಹುದು. ಆದರೆ ಈ ಒಂದು ಸ್ಥಿತಿಯಲ್ಲಿ ನೀವು ಸಹ ಬಾರ್ತಿಮಾಯನ ಹಾಗೆ ಯೇಸುವನ್ನು ಕೂಗಿದರೆ ಆತನು ನಿಶ್ಚಯವನ್ನು ನಿಮ್ಮ ರೋಗಗಳನ್ನು ಒಂದೇ ಕ್ಷಣದಲ್ಲಿ ಗುಣಪಡಿಸಿ ಬಿಡುವನು.

*ನಿಮ್ಮಲ್ಲಿ ಯಾವ ವ್ಯಾಧಿಯೂ ಉಂಟಾಗದಂತೆ*
*ಯೆಹೋವನ ಮಾಡುವನು (ಧರ್ಮೋ 7: 15)*

*ದೇವರಿಂದ ಬರುವ ಯಾವ ಮಾತಾದರೂ*
*ನಿಷ್ಫಲವಾಗುವುದಿಲ್ಲ. (ಲೂಕ 1:37)*

ಈ ಪತ್ರಿಕೆಯ ಮೂಲಕ ನೀವು ಯೇಸು ಕ್ರಿಸ್ತನನ್ನು ಅಂಗೀಕರಿಸಿ ಕೊಂಡಿದ್ದರೆ ಆದರೆ ಆತನ ಬಗ್ಗೆ ಇನ್ನೂ ತಿಳಿಯಲು ಇಚ್ಛಿಸಿ ಪುಸ್ತಕ ಮತ್ತು ಸಿ.ಡಿಗಳನ್ನು ಪಡೆಯಲು ನಮ್ಮ ಈ ಕೆಳಕಂಡ ವಿಳಾಸಕ್ಕೆ ಸಂಪರ್ಕಿಸಿ.


**VOICE OF JESUS PUBLICATIONS**
P.O.Box:6,Ramanathapuram.623501. S.Inidia.
Phone: 98941 31211- 94423 22264
Email: vojpulication@gmail.com

**VOICE OF JESUS MEDIA**
P.O.Box:7206,Bangalore- 560 072. Ph: 9731722977
Email: vojmedia@gmail.com


ಈ ಕರಪತ್ರಿಕೆಯನ್ನು ಉಚಿತವಾಗಿ ನೀಡಲಾಗುತ್ತದೆ ಮಾರಾಟ ಮಾಡುವುದಿಲ್ಲ

VOJ.TRACTS/2013/KANNADA